# <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.</u>

## ಸಿ ಮಿಸ್.62/2021

ಸಾಕ್ಷಿಯನ್ನು ದಿಃ 21.09.2022 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

<u>ಮುಂದುವರಿದ ಮುಖ್ಯ ವಿಚಾರಣೆಃ</u>

ಮದುವೆ ನಂತರ ಆರತಕ್ಷತೆ ಮುಗಿಸಿಕೊಂಡು ಎದುರುದಾರರು ನನ್ನನ್ನು ನಮ್ಮ ತಂದೆ ಮನೆಗೆ ಕರೆದುಕೊಂಡು ಬಂದು ನನ್ನ ತಂದೆ ಮನೆಯಲ್ಲೆ ಬಿಟ್ಟು ತಾವು ಕೆಲಸಕ್ಕೆ ಹೋದರು. ಎದುರುದಾರರು ಕೊಪ್ಪಳ ಜಿಲ್ಲೆಯ ಮುನಿರಾಬಾದ್ ನಲ್ಲಿ ರಿಸರ್ವಡ್ ಪೊಲೀಸ್ ಆಗಿ ಕೆಲಸ ಮಾಡುತ್ತಿದ್ದರು. ಎದುರುದಾರರು ನನ್ನನ್ನು ತಾನು ಕೆಲಸ ಮಾಡುತ್ತಿದ್ದ ಊರಿನಲ್ಲಿ **15** ದಿನ ಹಾಗೂ ನನ್ನ ತಾಯಿ ಮನಯಲ್ಲಿ **15** ದಿನ ಇರಿಸುತ್ತಿದ್ದರು.

ನಂತರ ಎದುರುದಾರರು ನನ್ನನ್ನು ನನ್ನ ತಾಯಿ ಮನೆಯಲ್ಲೆ ಬಿಟ್ಟಿದ್ದು **3** ತಿಂಗಳ ನಂತರವು ನನ್ನನ್ನು ಕರೆದುಕೊಂಡು ಹೋಗಲಿಲ್ಲ. ಈ ಬಗ್ಗೆ ನಾನು ಎದುರುದಾರರಿಗೆ ಕೂರಿಸಿ ಕೇಳಿದಾಗ ಎದುರುದಾರರು ತನಗೆ 6 ತಿಂಗಳಲ್ಲಿ ಮೈಸೂರು ಕಡೆ ವರ್ಗಾವಣೆ ಆಗುತ್ತದೆ ಅಲ್ಲಿಯವರೆಗೆ ನಮ್ಮ ತಾಯಿ ಮನೆಯಲ್ಲಿ ಹಾಗೂ ಅವರ ತಾಯಿ ಮನೆಯಲ್ಲಿ ಇರುವಂತೆ ಹೇಳಿದರು. ಇದನ್ನು ನಾನು ನಂಬಿ ಸುಮ್ಮನೆ ಇದ್ದೆ. ಮದುವೆ ಆದ **8** ತಿಂಗಳಲ್ಲಿ ನಾನು **3** ತಿಂಗಳ ಗರ್ಭಿಣಿ ಆಗಿದ್ದೆ. ಆ ಸಮಯದಲ್ಲಿ ನಾನು ನನ್ನ ಗಂಡನ ಜೊತೆ ಇರಬೇಕು ಎಂದು ಹೇಳಿ ನನ್ನನ್ನು ಕರೆದುಕೊಂಡು ಹೋಗುವಂತೆ ಹೇಳಿದ್ದೆ. ಅದಕ್ಕೆ ಎದುರುದಾರರು ನನ್ನನ್ನು ಮುನಿರಾಬಾದ್ ಗೆ ಕರೆದುಕೊಂಡು ಹೋದರು. ಎದುರುದಾರರು ತನಗೆ ಕೊರ್ಟರ್ಸ್ ಸಿಕ್ಕಿದ್ದರು ಕೂಡ ಆ ವಿಷಯ ನನಗೆ ತಿಳಿಸದೆ ತನ್ನ ಗೆಳೆಯನ ಕೊರ್ಟರ್ಸ್ನಲ್ಲಿ ಇರಿಸಿದ್ದರು. ಸ್ವಲ್ಪ ದಿನ ಅಡ್ಜಸ್ಟ್ ಮಾಡಿಕೊಂಡು ಇರು ನಮಗೆ ಕೊರ್ಟರ್ಸ್ ಸಿಕ್ಕ ತಕ್ಷಣ ಕರೆದುಕೊಂಡು ಹೋಗುತ್ತೇನೆ ಹೇಳಿದ್ದಕ್ಕೆ ನಾನು ನಂಬಿದೆ.

ನಂತರ ನನಗೆ ಎದುರುದಾರರ ಗೆಳೆಯರಾದ ಜಗದೀಶ್ ಅವರು ನಿಮಗೂ ಕೊರ್ಟರ್ಸ್ ಸಿಕ್ಕಿದೆ ಈ ವಿಷಯ ನಿಮಗೆ ಗೊತ್ತಿಲ್ಲವಾ ಗಂಡ-ಹೆಂಡತಿ ಮಾತನಾಡಿಕೊಂಡು ಅಲ್ಲಿಗೆ ಹೋಗಿ ಏಕೆ ಇಲ್ಲಿ ಉಳಿದುಕೊಂಡಿದ್ದೀರಾ ಎಂದು ಹೇಳಿದರು. ಸದರಿಯವರ ಕೋರ್ಟರ್ಸ್ **3** ನೇ ಅಂತಸ್ತಿನಲ್ಲಿ ಇದುದರಿಂದ ನಾನು ಕೊರ್ಟರ್ಸ್ ಆಗಿದ್ದರಿಂದ ನನಗೆ ಹತ್ತಿ ಇಳಿಯಲು ಆಗುತ್ತಿರಲಿಲ್ಲ. ಈ ಬಗ್ಗೆ ನಾನು ನಮ್ಮ ಕೊರ್ಟರ್ಸ್ಗೆ ಹೋಗೋಣ ಎಂದು ಹೇಳಿದಾಗ ಎದುರುದಾರರರು ನನ್ನನ್ನು ಕೋರ್ಟರ್ಸ್ ಗೆ ಕರೆದುಕೊಂಡು ಹೋಗಿ ತೋರಿಸಿದರು. ಅಷ್ಟರಲ್ಲಿ ಊರಿನಲ್ಲಿ ಜಾತ್ರೆ ಇದೆ ಎಂದು ಹೇಳಿ ನನ್ನನ್ನು ಊರಿಗೆ ಕರೆದುಕೊಂಡು ಬಂದರು. ಹಬ್ಬ ಮುಗಿದ ನಂತರ ನನ್ನನ್ನು ಜೊತೆಗೆ ಕರೆದುಕೊಂಡು ಹೋಗಲಿಲ್ಲ. **2** ವಾರ ಕಾದು ನಾನು ಎದುರುದಾರರಿಗೆ ದೂರವಾಣಿ ಕರೆ ಮಾಡಿದೆ. ಎದುರುದಾರರು ತನಗೆ ಬಂದು ಕರೆದುಕೊಂಡು ಹೋಗಲು ಸಮಯ ಇಲ್ಲ ಎಂದು ಹೇಳಿದರು. ನಾನು ನನ್ನ ತಂದೆ ಕರೆದುಕೊಂಡು ಬರಲು ಹೇಳಿದರು. ಆ ಸಮಯದಲ್ಲಿ ಕೂಡ ನನ್ನನ್ನು ಜಗದೀಶ್ ಅವರ ಕೋರ್ಟರ್ಸ್ ಲ್ಲಿ ಇರಿಸಿದರು. ಆಗ ನನ್ನ ತಂದೆ ಎದುರುದಾರರಿಗೆ ಬುದ್ದಿ ಹೇಳಿ ಬಂದರು. ಆದರೂ ಕೂ **20-25** ದಿನಗಳ ವರೆಗೆ ನನ್ನನ್ನು ಜಗದೀಶ್ ಅವರ ಕೋರ್ಟರ್ಸ್ ನಲ್ಲಿ ಇರಿಸಿದರು. ಈ ಬಗ್ಗೆ ನನ್ನ ತಂದೆಗೆ ತಿಳಿಸಿದಾಗ ನನ್ನ ತಂದೆ ಎದುರುದಾರರಿಗೆ ಬುದ್ದಿ ಹೇಳಿದರು. ಆದ್ದರಿಂದ ಎದುರುದಾರರು ನನ್ನನ್ನು ತನಗೆ ಸಿಕ್ಕಿರುವ ಕೋರ್ಟರ್ಸ್ ಗೆ ಕರೆದುಕೊಂಡು ಹೋದರು. ಎದುರುದಾರರು ಬಿ ಎಡ್ ಮಾಡಿದ್ದರಿಂದ ಬೆಟಾಲಿಯನ್ ನಲ್ಲಿ ಇರುವ ಶಾಲೆಯಲ್ಲಿ ಇವರನ್ನು ಟೀಚರ್ ಆಗಿ ಕೆಲಸಕ್ಕೆ ತೆಗೆದುಕೊಂಡಿದ್ದರು.

ಆ ಸಮಯದಲ್ಲಿ ನಾನು ಗರ್ಭಿಣಿಯಾಗಿದ್ದರು ಕೂಡ ಎದುರುದಾರರು ನನ್ನನ್ನು ಸರಿಯಾಗಿ ನೋಡಿಕೊಳ್ಳದೆ ಮನಗೆ ಸರಿಯಾಗಿ ಬರದೆ ಬೇಜಾವಾಬ್ದಾರಿಯಿಂದ ನಡೆದುಕೊಂಡರು, ಆದರೂ ನಾನು ಸಹಿಸಿಕೊಂಡು ಸುಮ್ಮನೆ ಇದ್ದೆ. ಡಿಲಿವರಿ ಸಮಯ ಹತ್ತಿರ ಬಂದಿದ್ದರಿಂದ ನನ್ನನ್ನು ಊರಿಗೆ ಕರೆದುಕೊಂಡು ಬಂದು ನನ್ನನ್ನು ನನ್ನ ತಂದೆ ಮನಗೆ ಕರೆದುಕೊಂಡು ಬಂದರು. ಹುಣಸೂರು ಸರಕಾರಿ ಆಸ್ಪತ್ರೆಯಲ್ಲಿ **29.07.2018** ರಲ್ಲಿ ನನಗೆ ಗಂಡು ಮಗು ಜನಿಸಿತು. ಎದುರುದಾರರು ಮಗು ಆದ **15** ದಿನ ರಜೆಯಲ್ಲಿ ನನ್ನ ಜೊತೆ ಇದ್ದರು. ಮಗು ಹಾರೈಕೆ ಆಗಬೇಕು ಎಂದು ನನ್ನನ್ನು ನನ್ನ ತಾಯಿ ಮನೆಯಲ್ಲಿ ಬಿಟ್ಟು ಹೋದರು.

ನಂತರ ನವೆಂಬರ್ ನಲ್ಲಿ ಎದುರುದಾರರು ತನ್ನ ಸ್ಪೋರ್ಟ್ಸ್ ಗೆಂದು ಬಂದಿದ್ದು, ಆದರೆ ಮಗು ನೋಡಲು ಬಂದಿರಲಿಲ್ಲ. ಆಗ ಎದುರುದಾರರು ನಾನು ಪಿ ಎಸ್ ಐ ಪರೀಕ್ಷೆ ಕಟ್ಟಿರುತ್ತೇನೆ. **30** ಲಕ್ಷಕ್ಕೆ ಡೀಲ್ ಮಾಡಿಕೊಂಡಿದ್ದೇನೆ. ಈಗ ನಾನು **20** ಲಕ್ಷ ವ್ಯವಸ್ಥೆ ಮಾಡಿದ್ದೇನೆ. **10** ಲಕ್ಷ ನಿನ್ನ ತಂದೆ ಯಿಂದ ಕೊಡಿಸಿಕೊಡು ಎಂದು ಹೇಳಿದ್ದರು. ಆ ಸಮಯ ನನ್ನ ತಂದೆಗೆ ಸ್ಟ್ರೋಕ್ ಆಗಿದ್ದು ದುಡ್ಡು ವ್ಯವಸ್ಥೆ ಮಾಡಿಕೊಡಲು ಆಗುವುದಿಲ್ಲ ನೀವು ಚೆನ್ನಾಗಿ ಓದಿ ಉತ್ತೀರ್ಣರಾಗಿ ಎಂದು ಹೇಳಿದ್ದೆ. ಎದುರುದಾರರು ಇದಕ್ಕೆ ಒಪ್ಪದೆ ಮುಂದಿನ ಸಾರಿ ಬರುವಷ್ಟರಲ್ಲಿ ನನಗೆ ಹಣದ ವ್ಯವಸ್ದೆ ಮಾಡಿಸಿಕೊಡು ಎಂದು ಹೇಳಿದ್ದರು. ಎದುರುದಾರರು ನನಗೆ ದೂರವಾಣಿ ಕರೆ ಮಾಡಿ ದುಡ್ಡು ವ್ಯವಸ್ದೆ ಆಯಿತಾ ಎಂದು ಕೇಳುತ್ತಿದ್ದರು.

ಎದುರುದಾರರು ತನಗೆ ದುಡ್ಡು ಬೇಕು ಎಂದು ಹಟ ಮಾಡುತ್ತಿದ್ದರು. ಪುನಃ ಡಿಸೆಂಬರ್ ನಲ್ಲಿ ಬಂದು ದುಡ್ಡಿನ ಬಗ್ಗೆ ಕೇಳಿದ್ದರು. ಆಗ ಎದುರುದಾರರು ನನ್ನನ್ನು ಹಾಗೂ ಮಗುವನ್ನು ಜೊತೆಗೆ ಕರೆದುಕೊಂಡು ಹೋದರು. ಎದುರುದಾರರು ನಾನು ದುಡ್ಡು ಕೊಡಿಸಿಕೊಟ್ಟಿಲ್ಲ ಎಂದು ನನ್ನನ್ನು ಹಾಗೂ ಮಗುವನ್ನು ಮನೆಯಲ್ಲಿ ಕೂಡಿ ಹಾಕಿ ಹಿಂಸೆ ಕೊಡಲು ಆರಂಭಿಸಿದರು. ನನಗೆ ಮತ್ತು ಮಗುವಿಗೆ ಸರಿಯಾಗಿ ಊಟ ಇಲ್ಲದೆ ವೀಕ್ ಆಗಿದ್ದೇವು. ನಾನು ಎದುರುದಾರರ ಕಿರುಕುಳ ತಾಳದೆ ಹುಷಾರು ತಪ್ಪಿದ್ದೆ. ಆಗ ಎದುರುದಾರರು ನನಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದರು. ಆ ಒಂದು ದಿನ ಎದುರುದಾರರು ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದರು. ಪುನಃ ದುಡ್ಡಿನ ವಿಚಾರದಲ್ಲಿ ನನಗೆ ಕಿರುಕುಳ ಕೊಡಲು ಪ್ರಾರಂಭಿಸಿದರು.

ಎದುರುದಾರರು ಮಾತನಾಡಿದ್ದನ್ನು ನಾನು ಫೋನ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದಕ್ಕೆ ನನ್ನ ಫೋನ್ ಕಿತ್ತು ಹಾಕಿದ್ದರು. ನನಗೆ ಅಕ್ಕಪಕ್ಕದವರ ಜೊತೆ ಮಾತನಾಡಲು ಬಿಡುತ್ತಿರಲಿಲ್ಲ. ಜನವರಿ ತಿಂಗಳಲ್ಲಿ ತಾನು ಪಿ ಎಸ್ ಐ ಪರೀಕ್ಷೆ ಬರೆಯಬೇಕೆಂದು ನನ್ನನ್ನು ಊರಿಗೆ ತಂದುಬಿಟ್ಟು ತಾನು ಪರೀಕ್ಷೆ ಬರೆದರು. ಆಗ ಎದುರುದಾರರು ಈಗಲೂ ಕಾಲ ಮಿಂಚಿಲ್ಲ ನಿನ್ನ ತಂದೆ ಹತ್ತಿರ ದುಡ್ಡು ಕೊಡಿಸು ಎಂದು ಹಿಂಸೆ ಮಾಡಿದರು. ನಾನು ದುಡ್ಡು ಕೇಳುವುದಿಲ್ಲ ಎಂದು ಹೇಳಿದ್ದಕ್ಕೆ ನನಗೆ

ಎದುರುದಾರರು ತನ್ನ ಮನೆಯಲ್ಲಿ ಬಿಟ್ಟು ತನ್ನ ಮನೆಯವರಿಗೆ ಎದುರುದಾರರು ಹೇಳಿದಾಗ ಮಾತ್ರ ನನಗೆ ಊಟ ಬಟ್ಟೆ ಕೊಡಬೇಕೆಂದು ಹೇಳಿದರು.

ಎದುರುದಾರರು ನನಗೆ ಹೋಗಬೇಕಾದರೆ ತನ್ನ ಕೀಪ್ಯಾಡ್ ಮೊಬೈಲ್ ಕೊಟ್ಟು ಹೋಗಿದ್ದರು. ಎದುರುದಾರರು ಅದರಿಂದ ದಿನ ಕರೆ ಮಾಡಿ ನನಗೆ ಕೆಟ್ಟದಾಗಿ ಬೈಯುವುದು ಮಾಡಿ ಹಿಂಸೆ ನೀಡುತ್ತಿದ್ದರು. ಅವರ ಮನೆಯವರಿಗೆ ನಾನು ಈ ರೀತಿ ಮಾಡಬೇಡಿ ಎಂದು ಹೇಳಿದರು ಅವರು ಕೇಳಲಿಲ್ಲ.

ಜನವರಿ ಕೊನೆ ವಾರದಲ್ಲಿ ನನ್ನನ್ನು ಹಾಗೂ ಮಗುವನ್ನು ಪುನಃ ತನ್ನ ಜೊತೆ ಕರೆದುಕೊಂಡು ಹೋದರು. ಪುನಃ **10** ಲಕ್ಷ ನನ್ನ ತಂದೆಯಿಂದ ತಂದುಕೊಡುವಂತೆ ಒತ್ತಾಯ ಮಾಡಿದರು. ನನ್ನ ತಂದೆಗೆ ಆಗುವುದಿಲ್ಲ ಎಂದು ನಾನು ಹೇಳಿದಾಗ ಒಳ ಸಂಚು ಮಾಡಿ ನನ್ನನ್ನು ಬಿಟ್ಟುಬಿಡಬೇಕೆಂದು ನಾನು ಸಂಜೆ ಸಮಯ ಮಗುವನ್ನು ಮಲಗಿಸಿ ಅಡುಗೆ ಮಾಡುತ್ತಿದ್ದಾಗ ನನ್ನ ಫೋನ್ ನಿಂದ ಯಾರಿಗೆ ಫೋನ್ ಮಾಡಲು ಪ್ರಯತ್ನ ಮಾಡುತ್ತಿದ್ದರೋ ನನಗೆ ಗೊತ್ತಿಲ್ಲ. ಆ ಸಮಯ ನನ್ನ ತಂದೆಯ ತಂಗಿ ಮಗ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು. ಎದುರುದಾರರು ನನಗೆ ನನ್ನ ತಂದೆಯ ತಂಗಿ ಮಗನಿಗೆ ಕೋರಿಯರ್ ಕಳುಹಿಸಿದ್ದೇನೆ ಅದನ್ನು ಪಡೆದುಕೊಳ್ಳಲು ಹೇಳು ಎಂದು ನನಗೆ ಆತನಿಗೆ ಒತ್ತಾಯ ಮಾಡಲು ಹೇಳಿದ್ದರು.

ನಾನು ನಿರಾಕರಿಸಿದ್ದಕ್ಕೆ ನನಗೆ ಒತ್ತಾಯ ಮಾಡಿದರು. ಆಗ ಮಗುವನ್ನು ಕರೆದುಕೊಂಡು ಬಂದು ನೀನು ಹೇಳದಿದ್ದರೆ ಮಗುವಿಗೆ ಹೆಚ್ಚು ಕಡಿಮೆ ಮಾಡುತ್ತೀನಿ ಎಂದು ಹೇಳಿದ್ದಕ್ಕೆ ನಾನು ತಂದೆಯ ತಂಗಿ ಮಗನಿಗೆ ಕೋರಿಯರ್ ಪಡೆದುಕೊಳ್ಳುವಂತೆ ಹೇಳಿದೆ. ಎದುರುದಾರರು ಏನು ಒಳಸಂಚು ಮಾಡಿದ್ದರು ನನಗೆ ಗೊತ್ತಿಲ್ಲ. ಅವರು ಮಾರನೆ ದಿನ ಸಾಮಾನ್ಯ ಸ್ಕೂಲ್ ಗೆ ಹೋದರು. **11** ಗಂಟೆ ಸಮಯ ಶಾಲೆಯಿಂದ ಬಂದು ನನ್ನನ್ನು ರೂಮ್ ಗೆ ಎಳೆದುಕೊಂಡು ಹೋದರು. ನಿಮ್ಮ ತಂದೆ ಹಾಗೂ ಚಿಕ್ಕಪ್ಪಂದಿರಿಗೆ ಅಲ್ಲಿಂದ ಹೋಗಲು ಹೇಳು ಎಂದು ಹೇಳಿದರು. ನನಗೆ ಯಾವುದೇ ವಿಷಯವನ್ನು ಸ್ಪಷ್ಟವಾಗಿ ಹೇಳಲಿಲ್ಲ.

ನಾನು ನನ್ನ ಚಿಕ್ಕಪ್ಪನಿಗೆ ಕರೆ ಮಾಡಿದಾಗ ನನಗೆ ಗೊತ್ತಾಗಿದ್ದು ಎದುರುದಾರರು ಮತ್ತು ಅವರ ಗೆಳೆಯ ನನ್ನ ತಂದೆಯ ತಂಗಿ ಮಗನಿಗೆ ಹೊಡೆಸಿ ಕೊಲೆ ಬೆದರಿಕೆ ಹಾಕಿಸಿ ಆಗ ನನ್ನ ಅತ್ತೆಯ ಮಗ ಗಂಗಾಧರ ಹಾಗೂ ಕುಮಾರ ಅವರ ಮೇಲೆ ಎಫ್ ಐ ಆರ್ ಮಾಡಿಸಿ, ಗಂಗಾಧರ ಅವರು ಎದುರುದಾರರಿಗೆ ಫೋನ್ ಮಾಡಿ ನಿನ್ನ ಮಾತು ಕೇಳಿಕೊಂಡು ಹೋಗಿದ್ದಕ್ಕೆ ನಾನು ಕೆಲಸ ಕಳೆದುಕೊಳ್ಳು ವ ಸ್ಥಿತಿ ಬಂದಿದೆ . ನೀನು ಬಂದು  ಎಫ್ ಐ ಆರ್ ತೆಗಿಸಿಕೊಡಿ ನನ್ನ ಕೆಲಸ ಉಳಿಸಿಕೊಡಿ ಎಂದು ಪದೇ ಪದೆ ಕರೆ ಮಾಡಲು ಪ್ರಾರಂಭಿಸಿದದಿರು. ಆಗ ಎದುರುದಾರರು ಹಾಗೂ ನನ್ನನ್ನು ಹಾಗೂ ಮಗುವನ್ನು ಬೆಂಗಳೂರಿಗೆ ಕರೆದುಕೊಂಡು ಹೋದರು.

ಮುಂದುವರಿದ ಮುಖ್ಯವಿಚಾರಣೆಗಾಗಿ ಸಮಯ ಕೋರಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.